**D.W-8**

**ದಿನಾಂಕಃ 13-01-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎನ್ ವಿ ಸಿ ವಕೀಲರಿಂದಃ**

1. ವಾದಿ ಈ ದಾವೆಯನ್ನು ಅವಳ ತಂದೆ ತಾಯಿ ಮತ್ತು ಅಣ್ಣ ತಮ್ಮಂದಿರ ಮೇಲೆ ದಾಖಲಿಸಿರುತ್ತಾರೆ. ದಾವಾ ಆಸ್ತಿ ಗಳು ಪಿತ್ರಾರ್ಜಿತವಾಗಿ ಬಂದಿರುತ್ತಾರೆ. ವಾದಿ ಮತ್ತು ಪ್ರತಿವಾದಿಯರು ದಾವಾ ಜಮೀನುಗಳನ್ನು ಸಾಮೂಹಿಕವಾಗಿ ದಾವಾ ಕಬ್ಜಾ ವಹಿವಾಟು ಮಾಡಿಕೊಂಡು ಬಂದಿರುತ್ತಾರೆ. ಈ ಹೊತ್ತಿನವರೆಗೂ ವಾದಿ ಮತ್ತು ಪ್ರತಿವಾದಿಯರ ಮದ್ಯ ದಾವಾ ಆಸ್ತಿಯಲ್ಲಿ ವಿಭಾಗ ಆಗಿರುವುದಿಲ್ಲ. ಸದರಿ ದಾವಾಆಸ್ತಿಗಳಲ್ಲಿ ವಾದಿಗೆ 1/6 ಅಂಶ ಹಿಸ್ಸೆ ಹಕ್ಕು ಇದೆ ಎಂದರೆ ನಿಜ.

**ಪಾಟೀ ಸವಾಲುಃ ಪ್ರತಿವಾದಿ ನಂ. 4 ಪರ ಶ್ರೀ ಟಿ ಎಸ್ ಎಂ ವಕೀಲರಿಂದಃ**

1. ನನಗೆ ವಾದಿ ಮತ್ತು ಪ್ರತಿವಾದಿಯರ ಸಂಪೂರ್ಣ ಪರಿಚಯ ಇದೆ. 1 ನೇ ಪ್ರತಿವಾದಿಗೆ ಒಟ್ಟು 5 ಮಕ್ಕಳು ಅವರಲ್ಲಿ 3 ಗಂಡು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಎಲ್ಲ ಮಕ್ಕಳ ಮದುವೆಯಾಗಿದೆ ಎಂದರೆ ನಿಜ. ಅವರು ತಮ್ಮ ಕೆಲಸದ ಅನುಕೂತೆಗಾಗಿ ಬೇರೆಬೇರೆ ವಾಸವಾಗಿದ್ದಾರೆ. 2 ನೇ ಪ್ರತಿವಾದಿಯ ತೀರಿಕೊಂಡಿರುತ್ತಾರೆ. 1 ನೇ ಪ್ರತಿವಾದಿಯ ಮತ್ತು 5 ನೇ ಪ್ರತಿವಾದಿಯ ಇವರು ಅಸುಂಡಿಯಲ್ಲಿ ವಾಸವಾಗಿದ್ದಾರೆ ಎಂದರೆ ನಿಜ. 6 ನೇ ಪ್ರತಿವಾದಿಯು ರಾಣೆಬೆನ್ನೂರಿನಲ್ಲಿ ವಾಸವಾಗಿದ್ದಾರೆ. ಅದೇ ರೀತಿ ವಾದಿ ಅವರ ಗಂಡನ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ನಿಜ. 4 ನೇ ಪ್ರತಿವಾದಿಯು ಧಾರವಾಡದಲ್ಲಿ ವಾಸವಾಗಿರುತ್ತಾನೆ. 4 ನೇ ಪ್ರತಿವಾದಿಯು ಯಾವ ಕೆಲಸ ಮಾಡುತ್ತಾನೆ ಎಂದು ನಿಖರವಾಗಿ ನನಗೆ ಗೊತ್ತಿಲ್ಲ.

2. 4 ನೇ ಪ್ರತಿವಾದಿಯು ಶಾಲೆಯನ್ನು ಬೇರೆ ಕಡೆ ಕಲಿತುಕೊಂಡು ಅಲ್ಲಿಯೇ ಉಳಿದಿರುತ್ತಾನೆ ಎಂದರೆ ಆತ ಶಾಲೆಯನ್ನು ಊರಲ್ಲಿ ಕಲಿತು ನಂತರ ದುಡಿಯಲು ಹೋಗಿರುತ್ತಾರೆ ಎಂದು ಹೇಳುತ್ತಾರೆ. ಆತ ಹೈಸ್ಕೂಲ್ ವರೆಗೆ ಊರಲ್ಲಿ ಕಲಿತರುತ್ತಾನೆ. ನಂತರ ಡಿಪ್ಲೊಮೊ ಇಂಜೀನಿಯರಿಂಗ ನ್ನು ದಾವಣಗೆರೆಯಲ್ಲಿ ಕಲಿತಿರುತ್ತಾನೆ ಎಂದರೆ ನಿಜ. ಡಿಪ್ಲೊಮೊ ಮುಗಿದ ನಂತರ ನೌಕರಿ ಸಲುವಾಗಿ ಬೇರೆ ಬೇರೆ ಕಡೆ ಹೋಗಿರುತ್ತಾನೆ ಎಂದರೆ ನಿಜ. 30 ವರ್ಷಗಳಿಂದು ಆತ ಸುಮಾರು 8 ರಿಂದ 10 ಕಂಪನಿಯಲ್ಲಿ ಕೆಲಸ ಮಾಡಿರುತ್ತಾನೆ ಎಂದರೆ ಮಾಡಿರಬಹುದು. ಈಗ ಆತ ಯಾವ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾನೆ ಎಂದು ನನಗೆ ಗೊತ್ತಿಲ್ಲ.

3. ಸುಧಾ ಇನ್ ಪ್ರಾ ಸ್ಟ್ರಕ್ಚರ್ ಕಂಪನಿಯಲ್ಲಿ ಕಲ್ಬುರ್ಗಿಯಲ್ಲಿ ಇಂಜೀಯರ್ ಆಗಿ ಕೆಲಸ ಮಾಡುತ್ತಾನೆ ಎಂದರೆ ಮಾಡಿತ್ತಿರಬಹುದು. ಆತನಿಗೆ ಸಾಕಷ್ಟು ಸಂಬಳ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪಿತ್ರಾರ್ಜಿತ ಆಸ್ತಿ 1 ನೇ ಪ್ರತಿವಾದಿಗೆ 7 ರಿಂದ 8 ಎಕರೆ ಜಮೀನು ಇದೆ. ಆದರೆ ನಾನು ಆ ಕುರಿತು ದಾಖಲೆಗಳನ್ನು ನೋಡಿಲ್ಲ. 1 ನೇ ಪ್ರತಿವಾದಿಗೆ ಕೇವಲ 2 ವರೆ ಎಕರೆ ಮಾತ್ರ ಮೂಲ ಪಿತ್ರಾರ್ಜಿತ ಆಸ್ತಿ ಇದೆ ಎಂದರೆ ಸರಿಯಲ್ಲ. ಖರೀದಿ ಆಸ್ತಿ ಬಿಟ್ಟು ಪಿತ್ರಾರ್ಜತಿ ಆಸ್ತಿ ಕೇವಲ 2 ವರೆ ಎಕರೆ ಜಮೀನು ಇದೆ ಎಂದರೆ ನಿಜ. 2 ವರೆಗೆ ಜಮೀನು ಖುಷ್ಕಿ ಜಮೀನು ಎಂದರೆ ಸರಿಯಲ್ಲ ಅದು ನೀರಾವರಿ ಜಮೀನು ಎಂದು ಹೇಳುತ್ತಾರೆ. ಬೇರೆ ಯಾವುದೇ ಉದ್ಯೋಗ 1 ನೇ ಪ್ರತಿವಾದಿಗೆ ಇತನಿಗೆ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಇತನು ಲಾವಣಿ ಹಾಕಿಕೊಂಡು ಬೇರೆ ಉದ್ಯೋಗ ಮಾಡಿಕೊಳ್ಳುತ್ತಿದ್ದ ಎಂಬ ಬಗ್ಗೆ ದಾಖಲೆಗಳನ್ನು ನಾನು ನೋಡಿಲ್ಲ.

4. ದಾವಾ ತಪಶೀಲು ಆಸ್ತಿ 3 ಖರೀದಿ ಮಾಡಿದ ಆಸ್ತಿ ಎಂದರೆ ನಿಜ. ಅದನ್ನು ಯಾರಿಂದ ಖರೀದಿಸಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಅದನ್ನು 4 ನೇ ಪ್ರತಿವಾದಿ ಖರೀದಿ ಮಾಡಿರುತ್ತಾನೆ ಎಂದು ಹೇಳಿರುತ್ತಾನೆ. ಆ ಕುರಿತು ದಾಖಲೆಯನ್ನು ನಾನು ನೋಡಿಲ್ಲ ಆದರೆ ವಹಿವಾಟು ಮಾಡುವುದನ್ನು ನಾನು ನೋಡಿರುತ್ತೇನೆ. ಸದರಿ ದಾವಾ ತಪಶೀಲು 3 ನೇ ಆಸ್ತಿಯನ್ನು 4 ನೇ ಪ್ರತಿವಾದಿ 1, ಪಂಚಯ್ಯ 2. ಶಂಕರಯ್ಯ 3. ರೇಣುಕಯ್ಯ 4. ಜಯಮ್ಮ ಮತ್ತು ನೀಲಮ್ಮ ರವರು ರೂ. 2,25,000/- ಕ್ಕೆ ಖರೀದಿ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿ ಪತ್ರ ರಾಣೆಬೆನ್ನೂರು ಸಬ್ ರೇಜಿಸ್ಟರ್ ಕಚೇರಿಯಲ್ಲಿ ನೋಂದಣಿ ಆಗಿರುಬಹುದು. ಸದರಿ ಖರೀದಿ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಖರೀದಿ ಹಿಡಿದ ವ್ಯವಹಾರವನ್ನು ಸಂಪೂರ್ಣವಾಗಿ 4 ನೇ ಪ್ರತಿವಾದಿ ಹಿಡಿದಿದ್ದು ಆತನ ಹಣ ಸಂದಾಯ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

5. 1 ನೇ ಪ್ರತಿವಾದಿಯ ತಂಗಿ ಮಲ್ಲಮ್ಮ ಹಿರೇಮಠ ಅಸುಂಡಿ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ನಿಜ. ತನಗೆ ಹಿಸ್ಸೆ ಬೇಕು ಎಂದು ಇದೆ ದಾವಾ ಆಸ್ತಿಗಳ ಮೇಲೆ ಅವಳು ಪಾಲು ದಾವೆ ದಾಖಲಿಸಿದ್ದಳು ಎಂದರೆ ನನಗೆ ಗೊತ್ತಿಲ್ಲ. ಅದು ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ರಾಣೇಬೆನ್ನೂರು ನೆದ್ದರಲ್ಲಿ ಅಸಲು ದಾವಾ ನಂ. 93/2015 ಅಂತಾ ದಾಖಲಾಗಿ ನಂತರ ಡಿಕ್ರಿಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ಆ ಡಿಕ್ರಿ ಪ್ರಕಾರ ಅವರಿಗೆ 1/3 ಹಿಸ್ಸೆ ಪಾಲು ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ತಪಶೀಲು 3 ನೇ ಆಸ್ತಿ ಇದು 4 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ತಪಿಶೀಲು 6 ನೇ ಆಸ್ತಿಯನ್ನು ನಾನು ನೋಡಿರುತ್ತೇನೆ. ಅದರ ಚಕ್ಕಬಂದಿ, ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ.

6. ಸದರಿ ಆಸ್ತಿಯನ್ನು ಯಾರು ಯಾವಾಗ ಯಾರಿಂದ ಖರೀದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ ಆದರೆ 1 ನೇ ಪ್ರತಿವಾದಿ ಖರೀದಿ ಮಾಡಿದ್ದ ಎಂದು ಹೇಳಿದ್ದ. ಸದರಿ ಮನೆಯನ್ನು 2015 ರಲ್ಲಿ ಕಟ್ಟಿರುತ್ತಾರೆ. ಸದರಿ ಮನೆಯನ್ನು 4 ನೇ ಪ್ರತಿವಾದಿ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾದ ಅನುಕ್ರಮ ನಂ. 3 ಮತ್ತು 6 ನೇ ಆಸ್ತಿಗೆ 1 ನೇ ಪ್ರತಿವಾದಿ ಮತ್ತು ಉಳಿದ ಪ್ರತಿವಾದಿಗೆ ಸಂಬಂಧಿಸಿದ ಆಸ್ತಿ ಅಲ್ಲ ಮತ್ತು ಖರೀದಿ ಮಾಡಲು ಸಹಾಯ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದ 4 ನೇಮತ್ತು 6 ನೇ ಆಸ್ತಿ ಏಕತ್ರಫ ರಾಣೆಯಿಂದ ಹಿಡಿದಿದ್ದ ಎಲ್ಲರ ಹೆಸರಿನಲ್ಲಿ ಹಿಡಿಯುತ್ತಿದ್ದರು ಎಂದರೆ ಸರಿಯಲ್ಲ. ಅದು 4 ನೇ ಪ್ರತಿವಾದಿಯ ಸ್ವಂತ ಗಳಿಕೆ ಹಣದಿಂದ ಖರೀದಿಸಿದ ಸ್ವಂತ ಆಸ್ತಿ ಎಂದರೆ ನನಗೆ ಗೊತ್ತಿಲ್ಲ.

7. ನಿಡಿ-2 ರಲ್ಲಿ ನನ್ನ ಸಹಿ ಇದೆ ಅದನ್ನು ತಯಾರಿಸಲು ತಂದೆ ಮತ್ತು ಮಕ್ಕಳು ಕರೆದಿದ್ದರು. ಸದರಿ ನಿಡಿ-2 ದಾಖಲೆಯನ್ನು ಉಪ ನೊಂದಣಿ ಕಚೇರಿಯಲ್ಲಿ ಬರೆದಿರುತ್ತಾರೆ ಅದನ್ನು ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಡಿ-2 ರನ್ನು ಬರೆಯಲು ಯಾರು ಮಾಹಿತಿ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ನಿಡಿ-2 ನ್ನು ಬರೆಯುವ ಸಮಯದಲ್ಲಿ ನಾನು ಪ್ರತಿವಾದಿ ನಂ. 1 ಮತ್ತು ಆತನ ಮಕ್ಕಳು ಇದ್ದರು. ನಿಡಿ-2 ಕ್ಕೆ ದಾಖಲೆಗೆ ನನ್ನ ಸಮಕ್ಷಮ ಸಹಿಯನ್ನು ಹಾಕಿರುತ್ತಾರೆ ನಂತರ ನನ್ನ ಸಹಿಯನ್ನು ಹಾಕಿರುತ್ತೇನೆ. ನಿಡಿ-2 ತಯಾರಿಸುವ ಸಮಯದಲ್ಲಿ 4 ನೇ ಪ್ರತಿವಾದಿ ಊರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ-2 ರಲ್ಲಿ 4 ನೇ ಪ್ರತಿವಾದಿ ಸಹಿಯನ್ನು ನಾನು ಪ್ರತಿವಾದಿ ನಂ. 1 ಮತ್ತು 5 ಮತ್ತು 6 ಸೇರಿ ಸೃಷ್ಟಿ ಮಾಡಿರುತ್ತೆವೆ ಎಂದರೆ ಸರಿಯಲ್ಲ. ಸೃಷ್ಟಿ ಮಾಡಿದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-2 ದಾಖಲೆ ಆದ ದಿನಾಂಕ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ ಪ್ರತಿವಾದಿ ನಂ. 7 (ಎ) ರವರ ಪರ ಶ್ರೀ ಎಸ್ ಎ ಕೆ ವಕೀಲರಿಂದಃ**

1. ಧಾರವಾಡದಲ್ಲಿ ತಪೋವನ ಎಲ್ಲಿ ಬರುತ್ತದೆ ಎಂದರೆ ಯುನಿವರ್ ಸೀಟಿಯಲ್ಲಿ ಬರುತ್ತದೆ ಬಸ್ ನಿಲ್ದಾಣದಿಂದ ಎಷ್ಟು ದೂರು ಎಂದು ನನಗೆ ಗೊತ್ತಾಗುವುದಿಲ್ಲ. ಸದರಿ ಮನೆಯನ್ನು ನಾನು ಗೃಹ ಪ್ರವೇಶ ಇದ್ದಾಗ ಹೋಗಿದ್ದೆ ನಂತರ ಹೋಗಿಲ್ಲ. ಗೃಹ ಪ್ರವೇಶಕ್ಕೆ 4 ನೇ ಪ್ರತಿವಾದಿಯ ತಂದೆ ನನಗೆ ಕರೆದಿದ್ದ. ಸದರಿ ಮನೆಯಲ್ಲಿ ಯಾರು ವಾಸವಾಗಿದ್ದಾರೆ ಮತ್ತು ಯಾರ ಸ್ವಾದೀನದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಆಸ್ತಿ ಸಂಬಂಧಿಸಿದಂತೆ ನಾನು ಉತಾರೆ, ಖರೀದಿ ಪತ್ರ ನೋಡಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ದಾವಾ ತಪಶೀಲು 6 ನೇ ಆಸ್ತಿ ಬಗ್ಗೆ ಬರೆಸಿಲ್ಲ. ದಾವಾ ತಪಶೀಲು 6 ನೇ ಆಸ್ತಿಯ ಬಗ್ಗೆ ನನಗೆ ವಯಕ್ತಿವಾಗಿ ನನಗೆ ಮಾಹಿತಿ ಇಲ್ಲ. ನನ್ನ ಪ್ರಮಾಣ ಪತ್ರ ತಯಾರಿಸಲು ಮಾಹಿತಿ ನಾನು ಕೊಟ್ಟಿಲ್ಲ.

2. 7 ನೇ ಪ್ರತಿವಾದಿ 4 ನೇ ಪ್ರತಿವಾದಿ ಕಡೆಯಿಂದ ದಾವಾ ತಪಶೀಲು 6 ನೇ ಆಸ್ತಿಯನ್ನು ರೂ. 35,25,000/- ಗಳಿಗೆ ದಿಃ 23-05-2018 ರಂದು ಖರೀದಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಸದರಿ ನಿವೇಶವನ್ನು ಬ್ಯಾಂಕಿನಿಂದ ಸಾಲ ಮಾಡಿ ಖರೀದಿಸಿದ್ದು ನಂತರ ಎಸ್ ಬಿ ಐ ಹುಬ್ಬಳ್ಳಿಯಲ್ಲಿ ರೂ. ನ 20,50,000/- ಹಣವನ್ನು ಸಾಲ ಪಡೆದು ಮನೆ ಕಟ್ಟಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ 7 ನೇ ಪ್ರತಿವಾದಿ 4 ನೇ ಪ್ರತಿವಾದಿ ತೆಗೆದು ಸಾಲಕ್ಕೆ ಹಣ ತುಂಬಿ ಖರೀದಿ ಪಡೆದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ 7 ನೇ ಪ್ರತಿವಾದಿ ತನ್ನ ಮಗನಾದ ಪ್ರತಿವಾದಿ ನಂ. 7 (ಎ) ಇತನಿಗೆ ನೊಂದಾಯಿತ ಭಕ್ಷಿಸು ಪತ್ರದ ಮೂಲಕ ಬಿಟ್ಟು ಕೊಟ್ಟಿರುತ್ತಾನೆ ಎಂದರೆ ನನಗೆ

ಗೊತ್ತಿಲ್ಲ. 2018 ರಿಂದ ಇಲ್ಲಿಯವರೆಗೆ 7 ನೇ ಪ್ರತಿವಾದಿ ಹಾಗೂ ಆತನ ಮಕ್ಕಳು ವಾಸ ಮಾಡುತ್ತಾ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

3. ದಾವಾ ತಪಶೀಲು ಆಸ್ತಿ ನಂ. 6 ರಲ್ಲಿ ವಾದಿಯರಿಗೆ ಅಥವಾ ಪ್ರತಿವಾದಿ ನಂ. 1 ರಿಂದ 6 ರವರಿಗೆ ಯಾವುದೇ ರೀತಿಯಿಂದ ಹಿಸ್ಸಾ ಹಕ್ಕು ಪಾಲು ಇಲ್ಲ ಎಂದರೆ ಸರಿಯಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರು ಸಹ 1 ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ರಾಣೇಬೆನ್ನೂರು.